ನೋಡು' ಎಂದು ರೇಗಿದ.

'....'

'ಕೊನೆಗೊಂದು ಮಾತು ಹೇಳ್ತೀನಿ ಕೇಳು. ಪ್ರತಿದಿನ ಬೆಳಿಗ್ಗೆ ಸಾಯಂಕಾಲ ಹನುಮಾಯಣ ಪಾರಾಯಣ ಮಾಡು. ವಾಯು ದೇವರು ಎಲ್ಲ ಸರಿಮಾಡ್ತಾರೆ'ಎಂದು ಸಲಹೆಯನ್ನಿತ್ತು ನಿರ್ಗಮಿಸಿದ. ಇಂಥ ಪಾರಾಯಣ ಗೀರಾಯಣಗಳಿಗೆ ಒಗ್ಗಿದ ಮನಸಲ್ಲ ನಂದು. ಬೆನ್ನು ನೋವು ಇತ್ಯಾದಿ ದೇಹದಾದ್ಯಂತ ನೋವುಗಳ ಜೊತೆಗೆ ಹೊಟ್ಟೆಯೊಳಗಣ ಗುಡುಗುಡು ಗುಮ್ಮ ಮತ್ತು ಎದೆಯುರಿಗಳು ನನ್ನನ್ನು ಹೈರಾಣುಗೊಳಿಸಿದವು.

ನನ್ನ ತೀರ್ಥರೂಪರು ಆಯುರ್ವೇದ ವೈದ್ಯರಾಗಿದ್ದರು. ಅವರಿಂದ ನನಗೆ ಆಯರ್ವೇದ ಚಿಕಿತ್ಸೆ ಮತ್ತು ಔಷಧಿ ಕ್ರಮದಲ್ಲಿ ಅಲ್ಪಸ್ವಲ್ಪ ಜ್ಞಾನವಿತ್ತು. ಕ್ವಾಥ, ಕಷಾಯ, ಗುಗ್ಗುಳ ತೈಲಗಳಿಂದ ಸರಿಹೋಗಬಹುದೆನ್ನಿಸಿ ಒಬ್ಬ ಆಯುರ್ವೇದ ವೈದ್ಯರನ್ನು ಕಂಡೆ. ಅವರು ನನ್ನ ನಾಡಿ ಹಿಡಿದು ಐದು ನಿಮಿಷ ಕಣ್ಮುಚ್ಚಿ ಧ್ಯಾನಸ್ಥರಂತೆ ಕುಳಿತರು. ನಂತರ ಕೈ ಬಿಟ್ಟು, 'ನೋಡಿ, ನಿಮ್ಮದು ವಾಯು ಪ್ರಕೃತಿ. ವಾಯು ಪ್ರಕೋಪದಿಂದ ಹೀಗಾಗ್ತಿದೆ. ವಾಯುಹಾರಿ ಕ್ವಾಥ್, ತಾಳೀಸಾದಿ ಗುಗ್ಗುಳ... ತಿಂಡಿ ಊಟಗಳ ನಂತರ ದಿನಾ ಮೂರು ಸರ್ತಿ ತಗೊಳ್ಳಿ, ಧನ್ವಂತರಿ ತೈಲವನ್ನ ಎದೆ ಹೊಟ್ಟೆಗೆ ಹಚ್ಚಿಕೊಂಡು ಚೆನ್ನಾಗಿ ತಿಕ್ಕಿ, ಅರ್ಧಗಂಟೆ ಬಿಟ್ಟು ಬಿಸಿಬಿಸಿ ನೀರಿನಲ್ಲಿ ಸ್ನಾನ ಮಾಡಿ. ಫಾರ್ಮಸಿಗೆ ಹೋಗಿ, ಅಲ್ಲಿ ಈ ಔಷಧಿಗಳನ್ನೆಲ್ಲ ಕೊಡ್ತಾರೆ... ವಯಸ್ಸು 81 ಆಯ್ತು ಅಂತೀರ. ವಯಸ್ಸಾದ ನಿಮ್ಮ ಬಾಡಿ ಈಗ ಬೆಂಜ್ ಓಲ್ಡ್ ಮಾಡೆಲ್ ಕಾರಿದ್ದ ಹಾಗೆ. ಹುಷಾರಾಗಿ ಡ್ರೈವ್ ಮಾಡಬೇಕು. ಸ್ವಲ್ಪ ಹೆಚ್ಚು ಕಮ್ಮಿ ಆದರೂ ಡೇಂಜರ್ ಝೋನಿಗೆ ನುಗ್ಗಿಬಿಡುತ್ತೆ. ಹುಷಾರು' ಎಂದು ಎಚ್ಚರಿಕೆಯ ಬುದ್ಧಿವಾದವನ್ನೂ ಹೇಳಿದರು. ಫಾರ್ಮಸಿಯಲ್ಲಿ ಔಷಧಿಗಳನ್ನೆಲ್ಲ ಕೊಟ್ಟು, 2400 + 200 = 2600 ಕೊಡಿ ಎಂದಳು. 'ಪ್ಲಸ್ ಏನಮ್ಮ?' ಎಂದೆ. 'ಅದು ಡಾಕ್ಟರ್ ಫೀಜು' ಎಂದಳು ಮಾರಾಟಗಿತ್ತಿ. 600ಕ್ಕೆ ಹೋಲಿಸಿದರೆ ಆಯುರ್ವೇದ ಅಗ್ಗ ಎಂದು ಮನಸ್ಸಿಗೆ ಸಮಾಧಾನವಾಯಿತು.

ಮಾರನೇ ದಿನ ಮತ್ತೆ ಬಂದ ಸುಧೀಂದ್ರ ಪಾರಾಯಣ ಜ್ಞಾಪಿಸಿದ.

'ಅವೆಲ್ಲ ಏನೂ ಬೇಡ. ನನಗೀಗ ಒಬ್ಬರು ಧನ್ವಂತರಿ ಸಿಕ್ಕಿದ್ದಾರೆ. ಅವರ ಆಯುರ್ವೇದದಿಂದ ಸಮಾಧಾನವಾಗಿದೆ.'

'ಅಯ್ಯಾ ಮಿತ್ರ, ಸ್ವಲ್ಪ ಸಾವಧಾನದಿಂದ ಯೋಚನೆಮಾಡು. ಸುಮ್ಮನೆ ವಾಯು ಜೀವೋತ್ತಮರನ್ನು ನಿಂದಿಸಬೇಡ. ಎದ್ದೆದ್ದು ಒದೀತಾನೆ ನಮ್ಮ ಮಧ್ವರಾಯ ಅನ್ನೋ ನಮ್ಮ ಡಿವಿಜಿ ಮಾತು ಜ್ಞಾಪಿಸಿಕೊ. ಈ ಥರಾ ಏನೂ ಎಡವಟ್ಟು ಮಾಡಿಕೋಬೇಡ. ವಾಯು ಜೀವೋತ್ತಮರು ಮನುಷ್ಯರಾದಿಯಾಗಿ ಸಕಲ ಪ್ರಾಣಿಗಳಿಗೂ ಪ್ರಾಣವಾಯು. ಅವರನ್ನ ಎದುರು ಹಾಕಿಕೊಂಡು ದೇಹವೆಂಬ ನಿವಾಸದಿಂದ ಅವರನ್ನ ಓಡಿಸೋ ಕೆಲಸ ಮಾಡಬೇಡ. ಪ್ರಾಣವಾಯು ಹೋದಮೇಲೆ ನೀನೆಲ್ಲಿ ಇರ್ತೀ. ವಾಯು ಜಿವೋತ್ತಮರು ಪ್ರಾಣ ವಾಯು.'

'ಹೌದಲ್ಲ, ಪ್ರಾಣ ಹೋದಮೇಲೆ ಇನ್ನೇನಿದೆ?'

'ಸುಧೀ, ಥ್ಯಾಂಕ್ಸ್ ಕಣೋ. ನೀನು ಹೇಳಿದಹಾಗೇ ಕೇಳ್ತೀನಿ. ಈಗ ನನ್ನ ಮೊರೆ ಕೇಳೂ: ವಾಯು ಜೀವೋತ್ತಮರೇ ನನ್ನ ಅಜ್ಞಾನ, ಅಪರಾಧಂಗಳನೆಲ್ಲ ಕ್ಷಮಿಸಿ. ಇನ್ನು ಮೇಲೆ ನಿಮ್ಮನ್ನ ನನ್ನ ದೇಹದಲ್ಲಿ ಬಚ್ಚಿಟ್ಟುಕೊಂಡೇ ಬದುಕೋದನ್ನ ಅಭ್ಯಾಸ ಮಾಡಿಕೋತೀನಿ. ಆದರೆ, ಘಟಿಂಗತನದ ತುಂಟಾಟ ಜಾಸ್ತಿಮಾಡಬೇಡಿರಿ ವಾಯು ಜೀವೋತ್ತಮರೇ. ಇಬ್ಬರೂ ಹಿತವಾಗಿ ಸಹಬಾಳ್ವೆ ನಡೆಸೋಣ' ಎಂದು ಕೈಜೋಡಿಸಿ ಪ್ರಾರ್ಥನೆ ಮಾಡಿದೆ.

'ತಥಾಸ್ತು' ಎಂದರು ಮಧ್ವಮುನಿಗಳು. ಆದರೂ ನಾನು ಮತ್ತು ವಾಯು ಜೀವೋತ್ತಮರ ನಡುವೆ ಆಗಾಗ ಖಟಪಿಟಿಯಾಗುತ್ತಲೇ ಇರುತ್ತದೆ. ಏನು ಮಾಡುವುದು. ನಮ್ಮ ಅಗ್ರಮಾನ್ಯ ನವ್ಯ ಕವಿ ಗೋಪಾಲಕೃಷ್ಣ ಅಡಿಗರಿಗೆ ಲಿವರ್ ತೊಂದರೆ ಇತ್ತು. ಒಮ್ಮೆ ಗಾಂಧೀ ಬಜಾರಿನಲ್ಲಿ ಭೇಟಿಯಾದಾಗ, 'ಲಿವರ್ ತುಂಬ ಕಷ್ಟ ಕೊಡ್ತಿದ್ಯಾ ಸರ್?' ಎಂದು ಕೇಳಿದೆ.

'ಏನು ಮಾಡೋದಯ್ಯ, ಐ ಹ್ಯಾವ್ ಡಿಸೈಡೆಡ್ ಟು ಲಿವ್ ವಿತಿಟ್.'

ನಾನೂ 'ಕವಿ ಶಿಷ್ಯನಾಗಿ' ಅದೇ ತೀರ್ಮಾನಕ್ಕೆ ಬಂದೆ. ಆದರೆ, ವಾಯು ಜೀವೋತ್ತಮರ ಉಪಟಳ ತುಂಬಾ ಜಾಸ್ತಿಯಾದಾಗ ಧನ್ವಂತರಿಗಳ ಮೊರೆ ಹೋಗುತ್ತೇನೆ.

●